**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಸೋಮವಾರಪೇಟೆ.**

**ಸಿ ಎಂ ಸಿಃ 3/2020**

ಪಿ.ಡಬ್ಲ್ಯೂ : 1

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ : 21.12.2021

| | | |
|---|---|---|
| ಹೆಸರು | : | ಕೆ ಎನ್ ವಸಂತ |
| ತಂದೆಯ ಹೆಸರು | : | ಕೆ ಕೆ ನೀಲಕಂಠಪ್ಪ |

**ಮುಖ್ಯ ವಿಚಾರಣೆ : ಶ್ರೀ ಪಿ ಕೆ ಜಿ ವಕೀಲರಿಂದ : ಅರ್ಜಿದಾರರ ಪರವಾಗಿ**

ನಾನು ಅರ್ಜಿದಾರನಿದ್ದು ನನ್ನ ಮುಖ್ಯ ವಿಚಾರಣೆ ಸಾಕ್ಷ್ಯವಾಗಿ ಶಪಥ ಪತ್ರವನ್ನು ಹಾಜರುಪಡಿಸಿರುತ್ತೇನೆ. ಶಪಥ ಪತ್ರದಲ್ಲಿ ಬರೆಸಿರುವುದನ್ನು ನಾನು ಹೇಳಿ ಬರೆಯಿಸಿದ್ದು ನಂತರ ಅದನ್ನು ಓದಿ ಸಹಿ ಮಾಡಿರುತ್ತೇನೆ. ಶಫಥ ಪತ್ರದಲ್ಲಿ ಬರೆದಿರುವುದು ಎಲ್ಲಾ ಸತ್ಯವಾಗಿರುತ್ತದೆ.

ಓ ಎಸ್ ನಂಬರ್ 130/2014 ರ ಆದೇಶ ಪುಟದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 1 ಎಂದು, ಸದರಿ ದಾವೆಯ ವಾದಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 2 ಎಂದು, 1 ನೇ ಅರ್ಜಿದಾರರಿಗೆ ಸದರಿ ದಾವೆಯಲ್ಲಿ ಬಂದ ಸಮನ್ಸ್ ನ ಆರ್ ಪಿ ಎ ಡಿ ಲಕೋಟೆಯನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 3 ಎಂದು, ನನಗೆ ಸದರಿ ದಾವೆಯಲ್ಲಿ ಬಂದ ಸಮನ್ಸ್ ನ ಆರ್ ಪಿ ಎ ಡಿ ಲಕೋಟೆಯನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 4 ಎಂದು, ಸದರಿ ದಾವೆಯ ತೀರ್ಪು

ಮತ್ತು ಡಿಕ್ರಿಯ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ ಪಿ 5 ಮತ್ತು 6 ಎಂದು, ಸದರಿ ದಾವೆಯಲ್ಲಿ ಎದುರುದಾರ ನೀಡಿದ ಸಾಕ್ಷ್ಯದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 7 ಎಂದು, ಸದರಿ ದಾವೆಯಲ್ಲಿ ಎದುರುದಾರ ಸಲ್ಲಿಸಿದ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ ಪಿ 8 ರಿಂದ 14 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೇಳಿರುವುದರಿಂದ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸೋಮವಾರಪೇಟೆ.